

## ಮಿಲ್‌ಫೋರ್ಡ್ ಸೌಂಡ್

# ಕಣಿವೆಯೊಡಲ ವಿಸ್ಮಯ

**ಚೆಲುವು, ಗಾಂಭೀರ್ಯ, ರಮಣೀಯತೆ, ಪ್ರಶಾಂತತೆಯನ್ನು ಹಾಸುಹೊದ್ದಂತಿರುವ ಮಿಲ್‌ಫೋರ್ಡ್ ಸೌಂಡ್, ನ್ಯೂಜಿಲೆಂಡ್‌ನ ಸುಂದರ ತಾಣ ಮಾತ್ರವಲ್ಲ, ಎಂದಿಗೂ ಮರೆಯಲಾರದ ವಿಸ್ಮಯ ಕೂಡ.**

■ **ಡಾ. ಎಚ್.ಎಸ್. ಅನುಪಮಾ**

ನ್ಯೂಜಿಲೆಂಡ್ ದೇಶವನ್ನು, ಅದರಲ್ಲೂ ಮಿಲ್‌ಫೋರ್ಡ್ ಸೌಂಡನ್ನು ನೋಡಿದ ಮೇಲೆ ಬೇರೇನನ್ನಾದರೂ ನೋಡಬೇಕು ಎಂಬ ಹಂಬಲವೇ ಮರೆಯಾಗಿಹೋಯಿತು. ಅಷ್ಟು ಗಾಢವಾಗಿ ಕಣ್ಮನಗಳನ್ನು ತುಂಬಿಕೊಂಡಿರುವ ತಾವು ಅದು. ರುಡ್ಯಾರ್ಡ್ ಕಿಪ್ಲಿಂಗ್ ಎಂಟನೆಯ ಅದ್ಭುತ ಎಂದು ಕರೆದ ಈ ತಾಣವು ನ್ಯೂಜಿಲೆಂಡಿನ ದಕ್ಷಿಣ ದ್ವೀಪದ ನೈರುತ್ಯ ತೀರದಗುಂಟ ಹರಡಿಕೊಂಡಿದೆ. ಉನ್ನತವಾದ ದಕ್ಷಿಣ ಆಲ್ಪ್ಸ್ ಪರ್ವತ ಶ್ರೇಣಿಗಳಿಂದ ಟಾಸ್ಮನ್ ಕಡಲನ್ನು ಸೇರುತ್ತಿದ್ದ ಹಿಮನದಿಗಳು ಕೋಟಿಗಟ್ಟಲೆ ವರ್ಷ ಚಲಿಸಿ ಆಳವಾದ, ವಿಸ್ತಾರವಾದ ಕಣಿವೆಗಳನ್ನು ರೂಪಿಸಿದವು.

ಹಿಮಯುಗದ ಕೊನೆಗೆ ಕಣಿವೆಗಳಲ್ಲಿ ಕಡಲ ನೀರು ಒಳನುಗ್ಗಿ 'ಫೋರ್ಡ್‌ಲ್ಯಾಂಡ್' ರೂಪುಗೊಂಡಿತು. ನ್ಯೂಜಿಲೆಂಡ್ ದೇಶ ಅದನ್ನು 'ಫೋರ್ಡ್‌ಲ್ಯಾಂಡ್ ನ್ಯಾಷನಲ್ ಪಾರ್ಕ್' ಎಂದು ಕರೆದಿದೆ. ರಮ್ಯ, ನಿರ್ಜನ ತಾಣದ ಹೃದಯ ಭಾಗದಲ್ಲಿದೆ ಮಿಲ್‌ಫೋರ್ಡ್ ಸೌಂಡ್.

ಫೋರ್ಡ್‌ಲ್ಯಾಂಡ್ ಪ್ರದೇಶದಲ್ಲಿ ರಸ್ತೆಯ ಮೂಲಕ ತಲುಪಲು ಸಾಧ್ಯವಿರುವ ಏಕೈಕ ತಾಣ ಮಿಲ್‌ಫೋರ್ಡ್ ಸೌಂಡ್. 25 ಚದರ ಕಿ.ಮೀ. ಪ್ರದೇಶದಲ್ಲಿ

